ಖರ್ಚು ಮಾಡಿದ್ದೇವೆ, ಮತ್ತೆ ಪುನಃ ಡ್ರಿಂಕಿಂಗ್ ವಾಟರ್ ಸ್ಕೇರ್‌ಸಿಟಿಗೆ ನಿಮಗೆ ಎಷ್ಟೆಷ್ಟು ಹಣ ಬೇಕೋ ಅಷ್ಟು ಹಣವನ್ನು ನ್ಯಾಚುರಲ್ ಕ್ಯಾಲಮಿಟೀಸ್ ಫಂಡ್‌ನಿಂದ ಸಹಾ ಬಿಡುಗಡೆ ಮಾಡುತ್ತೇವೆ. ರೆಗ್ಯುಲರ್ ಫಂಡ್‌ನಲ್ಲಿ ಕೆಲವು ಕೆಲಸ-ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ, ಈ ಮಾತನ್ನು ವ್ಯಕ್ತಪಡಿಸಿದ್ದೇನೆ. ರೆಗ್ಯುಲರ್ ಫಂಡ್‌ನಲ್ಲಿ ಹಣ ಇದ್ದರೂ ಕೂಡ ಅದಕ್ಕೆ ರೇಟ್ ಎನ್ವಾನ್ಸ್ ಮಾಡಿಲ್ಲ. ಅದಕ್ಕಾಗಿ ಅದರ ಕೆಲಸವನ್ನು ಚೀಫ್ ಸೆಕ್ರೆಟರಿಯವರಿಗೆ ವಹಿಸಲು ನೀವು ರೇಟನ್ನು ಎನ್ವಾನ್ಸ್ ಮಾಡಿ ರೆಕ್ಟಿಡ್ಯೂಲ್ ಮಾಡಿದರೆ, ಅವರಿಗೆ ಆದೇಶ ಕೊಟ್ಟು ಇರತಕ್ಕಂಥ ಹಣವನ್ನು ಖರ್ಚು ಮಾಡಲಾಗುತ್ತದೆ. ಈ ಕೆಲಸವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಅವರ ಬೇಡಿಕೆ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ನಾಳೆ ತಕ್ಷಣ ರಿವೈಸ್ ಮಾಡಿ, ರೇಟನ್ನು ತಕ್ಷಣ ನಿಗದಿ ಮಾಡುತ್ತೇವೆ. ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಮತ್ತು ತಮ್ಮ ಮುಖಾಂತರ ಕೂಡ ಸ್ಪಷ್ಟಪಡಿಸಿದ್ದಾರೆ. ಇದು ನನಗೂ ಕೂಡಾ ಗೊತ್ತಿದೆ. ಅದಕ್ಕೋಸ್ಕರ ದಯವಿಟ್ಟು ಆ ಕೆಲಸ ಮಾಡಿದರೆ, ಒಂದು ಕಡೆ ರೆಗ್ಯುಲರ್ ಫಂಡ್ ಕೂಡ ಬರುತ್ತದೆ. ಇನ್ನೊಂದು ಕಡೆ ಸ್ಕೇರ್‌ಸಿಟಿಗಾಗಿ ಹಣ ಬಿಡುಗಡೆ ಮಾಡಲು ಅನುಕೂಲವಾಗುತ್ತದೆ. ಎಷ್ಟು ಹಣ ಬಿಡುಗಡೆ ಮಾಡುತ್ತೀರೆಂದು ನೀವು ಕೇಳಿದ್ದೀರಿ. ಅಧ್ಯಕ್ಷರೇ, ಈಗಾಗಲೇ ಪ್ರತಿ ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ಗಳು 18 ಕೋಟಿ ರೂಪಾಯಿಗಳನ್ನು ಎಪ್ರಿಲ್ ಅಂತ್ಯದವರೆಗೆ ಕೇಳಿದ್ದರು. ಆವರಿಗೆ ಈಗಾಗಲೇ ಸುಮಾರು 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ಕೂಡ ಹಂತಹಂತವಾಗಿ ಏಪ್ರಿಲ್ ಅಂತ್ಯದೊಳಗಾಗಿ ಎಲ್ಲೆಲ್ಲಿ ಅವಶ್ಯ ಇದೆಯೋ ಅಲ್ಲಿಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತಿದ್ದೇವೆ.

(ಗ್ರಾಮೀಣಾಭಿವೃದ್ಧಿ ಸಚಿವರು ಸಭೆಯಿಂದ ಹೊರಟಾಗ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಸಹಕರಿಸಬೇಕು. ಅವರು 11.00 ಗಂಟೆಗೆ ಇನ್ನೊಂದು ಸದನದಲ್ಲಿ ಹಾಜರಾಗಬೇಕೆಂದು ನನಗೆ ಒಂದು ಚೀಟಿ ಬರೆದು ಕಳುಹಿಸಿದ್ದಾರೆ. ಅದಕ್ಕೆ ನಿಮ್ಮ ಎಲ್ಲರ ಪರವಾನಗಿ ಬೇಕೆಂದು ಕೇಳಿದ್ದಾರೆ. ನಾನು ಹೇಳಿದೆ, ಇದು ಬಹಳ ಪ್ರಾಮುಖ್ಯವಾದ ವಿಚಾರ, ಇಲ್ಲಿ ಪ್ರಸ್ತಾಪಿಸಲ್ಪಟ್ಟಿದೆ, ತಾವು ಇರಬೇಕೆಂದು ಹೇಳಿದೆ, ಅದಕ್ಕವರು, 11-55ಕ್ಕೆ ಅಲ್ಲಿಗೆ ಹೋಗಬೇಕೆಂದು ಇಲ್ಲಿಯವರೆವಿಗೂ ಕಾದಿದ್ದಾರೆ. ಆದುದರಿಂದ, ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಈಗ ಅವರು ಹೋಗುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರು ಸ್ಕೇರ್‌ಸಿಟಿ ಎಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಬೀದರ್, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗದ ಕೆಲವು ಭಾಗಗಳು ಅದರಲ್ಲಿ ಬಂದಿಲ್ಲ, ಅಲ್ಲಿಯೂ ಕೂಡಾ ಕುಡಿಯುವ ನೀರಿನ ತೊಂದರೆ ಇದೆ. ಸ್ಕೇರ್‌ಸಿಟಿ ಇದ್ದರೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಆ ರೀತಿ ಮೇಲೆ ಹೇಳಿರುವ ಜಿಲ್ಲೆಗಳಿಗೆ ಏನಾದರು ಹಣವನ್ನು ನಿಗದಿ ಮಾಡಿದ್ದೀರಾ? ಅಥವಾ ಅಲ್ಲಿ ಸ್ಕೇರ್‌ಸಿಟಿ ಇದ್ದರೆ ಇಮ್ಮೀಡಿಯೇಟ್ ಆಗಿ ಕ್ರಮ ತೆಗೆದುಕೊಂಡು ಹಣವನ್ನು ಬಿಡುಗಡೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ, ಜಿಲ್ಲಾಧಿಕಾರಿಗಳು ಕೇಳಿದ ಪ್ರಕಾರ ಅವಶ್ಯಕವಾಗಿರುವ ಕಡೆ ಹಣವನ್ನು ಬಿಡುಗಡೆ ಮಾಡಿದ್ದೇವೆ, ನಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಂದು ಕೇಳಿದರೆ... ತಮಗೆ ಗೊತ್ತಿದೆ ಅಧ್ಯಕ್ಷರೆ ಇವತ್ತು ಒಂದು ತಾಲ್ಲೂಕಿನ ಮೂರು ಹಳ್ಳಿಗಳಲ್ಲಿ